# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ ಕಟ್ಟಡ ಜಯಂತಿ ನಗರ ವೃತ್ತ ಹೊರಮಾವು/ಕಲ್ಕೆರೆ ಮುಖ್ಯರಸ್ತೆ,
ಹೊರಮಾವು ಗ್ರಾಮ, ಬೆಂಗಳೂರು- 560113

ಸಂಖ್ಯೆ.ಬಿಬಿಎಂಪಿ/ಸ.ಕಾ.ಅ/ಹೊಉವಿ/ಪಿಆರ್/ 24/2021-22 ದಿನಾಂಕ: 21.12.2021

*ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/2020-21 ದಿನಾಂಕ:21/09/2020 ಹಾಗೂ ನೋಡಲ್ ಅಧಿಕಾರಿ/ಕಂದಾಯ ಅಧಿಕಾರಿ (ಕೆ.ಆರ್.ಪುರ) ರವರು ದಿನಾಂಕ:-21.12.2021 ರಂದು ಹೊರಮಾವು ಉಪ-ವಿಭಾಗದ ರಾಮಮೂರ್ತಿನಗರ ವಾರ್ಡ್-26 ರ ಕಛೇರಿಯಲ್ಲಿ ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.*

ಉಪಸ್ಥಿತರು:

| ಕ್ರ.ಸಂ | ಹೆಸರು | ಹುದ್ದೆ | ಮೊ.ಸಂ |
|---|---|---|---|
| 1 | ಶ್ರೀ.ಬಸವ ಚಾರಿ | ನೋಡಲ್ ಅಧಿಕಾರಿ ವಾರ್ಡ್ ನಂ-26 | |
| 2 | ಶ್ರೀ. ಚಂದ್ರಶೇಖರ್ | ಸಹಾಯಕ ಕಾರ್ಯಪಾಲಕ ಅಭಿಯಂತರರು | 9844587466 |
| 3 | ಶ್ರೀ.ವಿಕ್ರಮ್ ಸಜ್ಜನ್ ಶೆಟ್ಟಿ | ಸಹಾಯಕ ಅಭಿಯಂತರರು ಮತ್ತು ನೋಡಲ್ ಅಧಿಕಾರಿ ವಾರ್ಡ್ ನಂ-26 | 9739838297 |
| 4 | ಶ್ರೀ. ಚಂದ್ರಕಲಾ | ಕಿರಿಯ ಆರೋಗ್ಯ ಪರಿವೀಕ್ಷಕರು | 9620101648 |
| 5 | ಶ್ರೀ.ಚಿಟ್ಟಿಬಾಬು, ಸಹಾಯಕರು, | ಅರಣ್ಯ ಬಿ.ಬಿ.ಎಂ.ಪಿ | 9945430665 |
| | ಸಾರ್ವಜನಿಕರು | | |
| 9 | ಶ್ರೀ.ಸತೀಶ್ | ಬಂಜಾರ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ | - |
| 10 | ಗೋವಿಂದರಾಜು | ರಿಚ್ಚ್‌ಸ್ ವೆಲ್‌ಫೇರ್ ಅಸೋಸಿಯೇಷನ್ | - |
| 11 | ಶ್ರೀ.ಮೈಕಾಲ್ | ಎನ್.ಆರ್.ಐ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ | - |
| 12 | ಗೋವಿಂದರಾಜು | ರಿಚ್ಚ್‌ಸ್ ವೆಲ್‌ಫೇರ್ ಅಸೋಸಿಯೇಷನ್ | - |
| 13 | ಶ್ರೀ. ಹ್ಯಾರಿ | ಮಂಜುನಾಥ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ | - |
| 14 | ಶ್ರೀ. ಪ್ರಶಂತ್ | ಗೊಲ್ಲನ್ ಎನ್‌ಕ್ಲೇವ್ | - |
| 15 | ಶ್ರೀ. ಆನಂದ | ಪುಣ್ಯಭೂಮಿ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ | - |
| 16 | ಶ್ರೀ.ಶಂಕರ್ | ಟ್ರೀನಿಟಿ ಎನ್‌ಕ್ಲೇವ್ | - |
| 17 | ಎನ್.ಆರ್.ಐ ಬಡಾವಣೆ | ಸುಜಾತ ಶೆಟ್ಟಿ | - |

ಮಾನ್ಯ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರ ಸಮ್ಮುಖದಲ್ಲಿ ಗೂಗಲ್ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ/ಸಿಬ್ಬಂದಿ ಇತರೆ ಸಂಘ ಸಂಸ್ಥೆಗಳು ಸಾರ್ವಜನಿಕರಿಗೆ ಸುಸ್ವಾಗತ ಕೋರುತ್ತಾ, ಬಿಬಿಎಂಪಿ ವಾರ್ಡ್ ನಂ.26 ರ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯ, ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ನಗರದ ಸ್ವಚ್ಛತೆ, ರಸ್ತೆ ನಿರ್ವಹಣೆ, ಬೃಹತ್ ನೀರುಗಾಲುವೆಗಳ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ, ಕಲ್ಯಾಣ ಕಾರ್ಯಕ್ರಮಗಳು, 110 ಹಳ್ಳಿಗಳ ವ್ಯಾಪ್ತಿಯಲ್ಲಿ ಬಿಡಬ್ಲೂಎಸ್‌ಎಸ್‌ಬಿ ರವರು ಕೊಳವೆ ಸಾಲುಗಳ ಅಳವಡಿಸುತ್ತಿರುವ ಸಂಬಂಧ ಹಾಗೂ ಸಾರ್ವಜನಿಕರ ಸಮಸ್ಯೆ ಕುಂದುಕೊರತೆಗಳನ್ನು ಬಗೆಹರಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿ ಹಾಗೂ ಸಾರ್ವಜನಿಕರಿಗೆ ಸುಸ್ವಾಗತ ಕೋರಿ ಸಭೆಯನ್ನು ಆರಂಭಿಸಿದರು.

**ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚೆ:-**

**ಸತೀಶ್ ಬಂಜಾರ ಕನಕಗಿರಿ ಬಡಾವಣೆ :-** ರವರು ಮಾತನಾಡಿ ಬಂಜಾರ ಕನಕಗಿರಿ ಬಡಾವಣೆಯ ಮುಖ್ಯ ರಸ್ತೆಯಲ್ಲಿ ಆರ್.ಸಿ.ಸಿ ಚರಂಡಿಯ ಕೆಲಸವನ್ನು ಮಾಡುತ್ತಿರುತ್ತಾರೆ ಎಂದು ಸಭೆಯಲ್ಲಿ ತಿಳಿಸಿದರು.

2) ಬಂಜಾರ ಬಡಾವಣೆಯಲ್ಲಿ ಬೋರವೆಲ್‌ಗಳು ಪದೇ ಪದೇ ರೀಪೇರಿ ಬರುತ್ತಿದ್ದು ದಯವಿಟ್ಟು ಸರಿಪಡಿಸಬೆಕೆಂದು ಸಭೆಯು ಸೂಚಿಸಿತು.

**ಕ್ರಮ:-** ಸಹಾಯಕ ಅಭಿಯಂತರರು, ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

**ಶಂಕರ್ ಟ್ರೀನಿಟಿ ಎನ್‌ಕ್ಲೇವ್ ಅಸೋಸಿಯೇಷನ್:-** ರವರು ಮಾತನಾಡಿ ಟ್ರಿನಿಟಿ ಬಡಾವಣೆಯಲ್ಲಿ ಚರಂಡಿಗಳು ಹಾಗೂ ರಸ್ತೆಯ ಕೆಲಸವು ಬಾಕಿ ಇದ್ದು ಕೂಡಲೇ ಕೆಲಸವನ್ನು ಮಾಡುವುದಾಗಿ ಸಬೆಯಲ್ಲಿ ತಿಳಿಸಿದರು.

2) ಬಡಾವಣೆಯ ಮುಖ್ಯ ರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದು ಕೂಡಲೇ ವೆಟ್‌ಮಿಕ್ಸನ್ನು ಹಾಕುವುದಾಗಿ ಸಭೆಯಲ್ಲಿ ತಿಳಿಸಿದರು.

3) ಟ್ರಿನಿಟಿ ಬಡಾವಣೆಯಲ್ಲಿ 1.5 ಕೀ.ಮಿ ಚರಂಡಿಗಳು ಇಲ್ಲದೆ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಹೊಸದಾಗಿ ಚರಂಡಿಯನ್ನು ಮಾಡುವುದಾಗಿ ಸಭೆಯಲ್ಲಿ ತಿಳಿಸಿದರು.

ಕ್ರಮ:- ಸಹಾಯಕ ಅಭಿಯಂತರರು, ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

**ಶ್ರೀ.ಆನಂದ, ಪುಣ್ಯಭೂಮಿ ಬಡಾವಣೆ :-** ರವರು ಮಾತನಾಡಿ 6ನೇ ಅಡ್ಡ ರಸ್ತೆಯಲ್ಲಿ ಒಳ ಚರಂಡಿಯು ನೀರು ಹರಿದು ರಸ್ತೆಯಲ್ಲಿ ಬರುತ್ತಿದ್ದು ಸಾರ್ವಜನಿಕರಿಗೆ ಒಡಾಡಲು ತುಂಬಾ ಕಷ್ಟಕರವಾಗಿದ್ದು ಕೂಡಲೇ ಸರಿಪಡಿಸುವುದಾಗಿ ಸಬೆಯಲ್ಲಿ ತಿಳಿಸಿದರು.

2) ಬಡಾವಣೆಯಲ್ಲಿ ಹಲವು ಕಡೆಗಳಲ್ಲಿ ವಿದ್ಯುತ್ ದೀಪ ಇಲ್ಲದೆ ಸಾರ್ವಜನಿಕರಿಗೆ ಒಡಾಡಲು ತುಂಬಾ ಕಷ್ಟಕರವಾಗಿದ್ದು ಕೂಡಲೇ ವಿದ್ಯುತ್ ದೀಪಗಳನ್ನು ಅಳವಡಿಸುವುದಾಗಿ ಸಬೆಯಲ್ಲಿ ತಿಳಿಸಿದರು.

**ಕ್ರಮ:-** ಬೆಸ್ಕಾಂ ಅದಿಕಾರಿಗಳು ಸಬೆಗೆ ಗೈರಾಜಾಗಿದ್ದರಿಂದ, ಸಹಾಯಕ ಅಭಿಯಂತರರಾದ ಶ್ರೀ. ವಿಕ್ರಮ್ ಸಜ್ಜನ್ ಶೆಟ್ಟಿ ರವರು ಅಗತ್ಯ ಕ್ರಮವಹಿಸಲು ಬೆಸ್ಕಾಂ ಅದಿಕಾರಿಗಳಿಗೆ ತಿಳಿಸುವುದಾಗಿ ಸಭೆಯು ಸೂಚಿಸಿತು.

**ಆಂದ್ರ ಕಾಲೋನಿ:-** ರವರು ಮಾತನಾಡಿ ಆಂದ್ರ ಕಾಲೋನಿಯಲ್ಲಿ ರಸ್ತೆಗಳು ತುಂಬಾ ಹಾಳಾಗಿದ್ದು, ಸಾರ್ವಜನಿಕರಿಗೆ ರಸ್ತೆಯಲ್ಲಿ ಓಡಾಡಲು ಕಷ್ಟಕರವಾಗಿದ್ದು, ಸದರಿ ರಸ್ತೆಯನ್ನು ಕೂಡಲೇ ಡಾಂಬರೀಕರಣ ಮಾಡುವುದಾಗಿ ಸಬೆಯಲ್ಲಿ ತಿಳಿಸಿದರು.

**ಕ್ರಮ:-** ಸಹಾಯಕ ಅಭಿಯಂತರರು, ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

2) ಆಂದ್ರ ಬಡಾವಣೆಯಲ್ಲಿ ಹಲವು ಕಡೆ ನಾಮಫಲಕ ಇರುವುದಿಲ್ಲ, ರಸ್ತೆಯ ವಿಳಾಸ ಸಾರ್ವಜನಕರಿಗೆ ಕಿರಿ ಕಿರಿ ಉಂಟಾಗಿತ್ತಿದ್ದು ಕೂಡಲೇ ನಾಮಫಲಕವನ್ನು ಅಳವಡಿಸಬೇಕೆಂದು ಸಬೆಯಲ್ಲಿ ತಿಳಿಸಿದರು.

**ಕ್ರಮ:-** ಸಹಾಯಕ ಅಭಿಯಂತರರು, ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

3) ಬಡಾವಣೆಯಲ್ಲಿ ಚರಂಡಿಗಳು ಇಲ್ಲದೆ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಹೊಸದಾಗಿ ಚರಂಡಿಯನ್ನು ಮಾಡುವುದಾಗಿ ಸಭೆಯಲ್ಲಿ ತಿಳಿಸಿದರು.

**ಕ್ರಮ:-** ಸಹಾಯಕ ಅಭಿಯಂತರರು, ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

4) ಬಡಾವಣೆ ಮುಖ್ಯ ರಸ್ತೆಯಲ್ಲಿ, ಬೀದಿ ದೀಪಗಳು ಇಲ್ಲದೆ ಇರುವುದರಿಂದ ರಾತ್ರಿ ಸಮಯದಲ್ಲಿ ಓಡಾಡಲು ಕಷ್ಟಕರವಾದ್ದರಿಂದ ಕೂಡಲೇ ಬೀದಿ ದೀಪಗಳನ್ನು ಅಳವಡಿಸುವುದಾಗಿ ಸಬೆಯಲ್ಲಿ ತಿಳಿಸಿದರು.

**ಕ್ರಮ:-** ಬೀದಿ ದೀಪಕ್ಕೆ ಸಂಬಂದಪಟ್ಟವರು ಸಬೆಗೆ ಗೈರಾಜಾಗಿದ್ದರಿಂದ, ಸಹಾಯಕ ಅಭಿಯಂತರರಾದ ಶ್ರೀ. ವಿಕ್ರಮ್ ಸಜ್ಜನ್ ಶೆಟ್ಟಿ ರವರು ಅಗತ್ಯ ಕ್ರಮವಹಿಸಲು ತಿಳಿಸುವುದಾಗಿ ಸಭೆಯು ಸೂಚಿಸಿತು.

<u>ಪ್ರಶಾಂತ್ ಗೋಲ್ಡನ್ ಎನ್‌ಕ್ಲೇವ್:-</u> ರವರು ಮಾತನಾಡಿ ಗೋಲ್ಡನ್ ಎನ್‌ಕ್ಲೇವ್ ರಸ್ತೆಯ ಕೆಲಸವು ಪ್ರಗತಿಯಲ್ಲಿದ್ದು ರಸ್ತೆಯನ್ನು ಅತಿಶೀಘ್ರದಲ್ಲಿ ಮಾಡಬೇಕೆಂದು ಎಂದು ಸಬೆಯಲ್ಲಿ ತಿಳಿಸಿದರು.

**ಕ್ರಮ:-** ಸಹಾಯಕ ಅಭಿಯಂತರರು, ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

<u>ಶ್ರೀಮತಿ. ಸುಜಾತ ಶೆಟ್ಟಿ, ಎನ್.ಆರ್.ಐ ಅಸೋಸಿಯೇಷನ್:-</u> ರವರು ಮಾತನಾಡಿ 5ನೇ ಅಡ್ಡ ರಸ್ತೆಯು ತುಂಬಾ ಹಾಳಗಿದ್ದು ರಸ್ತೆಯಲ್ಲಿ ಒಡಾಡಲು ತುಂಬಾ ಕಷ್ಟಕರವಾಗಿದ್ದು ದಯವಿಟ್ಟು ಕೂಡಲೇ ಸರಿಪಡಿಸಬೇಕೆಂದು ತಮ್ಮಲ್ಲಿ ವಿನಂತಿಸಿಕೊಳುತ್ತೇವೆ.

**ಕ್ರಮ:-** ಸಹಾಯಕ ಅಭಿಯಂತರರು, ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

2) 11ನೇ ಅಡ್ಡ ರಸ್ತೆಯಲ್ಲಿ ಚರಂಡಿಯಲ್ಲಿ ಹೂಳು ತುಂಬಿದ್ದು ಕೂಡಲೇ ಹೂಳನ್ನು ತೆಗೆಯಬೇಕೆಂದು ಸಬೆಯಲ್ಲಿ ತಿಳಿಸಿದರು.

ಕ್ರಮ:- ಸಹಾಯಕ ಅಭಿಯಂತರರು, ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ನೋಡಲ್ ಅಧಿಕಾರಿ ರವರು ಸಭೆಯಲ್ಲಿ ನುರಿತ ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಸಮಗ್ರವಾಗಿ ಅಭಿವೃದ್ದಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಂದನೆಗಳೊಂದಿಗೆ ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ನೋಡಲ್ ಅಧಿಕಾರಿ ವಾರ್ಡ್ ನಂ.26
ಹಾಗೂ ಕಂದಾಯ ಅಧಿಕಾರಿ
ಕೆ.ಆರ್.ಪುರ ವಿಬಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರು
ಹೊರಮಾವು ವಾರ್ಡ್‌ನಂ.26
ಬಿ.ಬಿ.ಎಂ.ಪಿ